ಮಾಡಿಲ್ಲ. ಇದರ ಬಗ್ಗೆ 1996-97ನೇ ಸಾಲಿನಲ್ಲಿ ಪರಿಗಣಿಸಲಾಗುವುದು.

ಆ) ಇಲ್ಲ.

ಇ) ಇಲ್ಲ.

ವಿಷಯ:- ಬಿಜಾಪುರ ಜಿಲ್ಲೆಯ ಲೋಕಾಪುರ - ಕೇಕಲಮಟ್ಟಿ - ಕಾಡರಕೊಪ್ಪ ರಸ್ತೆ ಮೇಲೆ ನಿರ್ಮಿಸುತ್ತಿರುವ ಸೇತುವೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 640 (546)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ಲೋಕಾಪುರ - ಕೇಕಲಮಟ್ಟಿ - ಕಾಡರಕೊಪ್ಪ ಜಿಲ್ಲಾ ಮುಖ್ಯ ರಸ್ತೆಯ ಮೇಲೆ ಕಟ್ಟುತ್ತಿರುವ ಕಿ.ಮೀ. 6 ಮತ್ತು 11ರಲ್ಲಿ ಎರಡು ಸೇತುವೆಗಳು ಯಾವಾಗ ಮಂಜೂರಾಗಿವೆ ವರ್ಷ ಹಾಗೂ ಅಂದಾಜು ವೆಚ್ಚದ ವಿವರ ನೀಡುವುದು.

ಆ) ಕಾಮಗಾರಿ ಕುಂಠಿತಗೊಂಡು ನಿಗಧಿತ ಅವಧಿಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಬಿಜಾಪುರ ಜಿಲ್ಲೆಯ ಲೋಕಾಪುರ - ಕೇಕಲಮಟ್ಟಿ - ಕಾಡರಕೊಪ್ಪ ಜಿಲ್ಲಾ ಮುಖ್ಯ ರಸ್ತೆಯ ಮೇಲೆ ಕಟ್ಟುತ್ತಿರುವ ಕಿ.ಮೀ. 6ರಲ್ಲಿನ ಸೇತುವೆ 1993-94ರಲ್ಲಿ 4 ಲಕ್ಷ ರೂ. ಅಂದಾಜಿಗೆ ಮಂಜೂರಾಗಿದೆ. ಕಿ.ಮೀ.11ರಲ್ಲಿನ ಸೇತುವೆ 1991-92ರಲ್ಲಿ 4.88 ಲಕ್ಷ ರೂ. ಅಂದಾಜಿಗೆ ಮಂಜೂರಾಗಿದೆ.

ಆ) ಕಿ.ಮೀ. 6ರಲ್ಲಿನ ಸೇತುವೆಯ ಕಾಮಗಾರಿ ಬಗ್ಗೆ ಭೂಮಾಲೀಕರಿಂದ ತಕರಾರು ಇದ್ದು, ಪ್ರಕರಣವು ನ್ಯಾಯಾಲಯದಲ್ಲಿ ಇರುವುದರಿಂದ, ನಿರ್ಣಯ ಆಗುವವರೆಗೆ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ಕಿ.ಮೀ.10ರಲ್ಲಿನ ಸೇತುವೆ ನಿರ್ಮಾಣದ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಸದರಿ ಗುತ್ತಿಗೆದಾರರು ಕೆಲಸವನ್ನು ಪೂರ್ಣಗೊಳಿಸದೆ ಇದ್ದುದರಿಂದ ಗುತ್ತಿಗೆಯನ್ನು ರದ್ದುಗೊಳಿಸಿ ಹೊಸ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದ್ದು, ಇನ್ನು 6 ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು.

ವಿಷಯ:- ರಾಜ್ಯದಲ್ಲಿ ಮದ್ಯಪಾನ ನಿಷೇಧ ಜಾರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 641 (1437)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ):- ಮಾನ್ಯ ಅಬಕಾರಿ ಸಚಿವರು ಈ

ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮದ್ಯಪಾನ ನಿಷೇಧ ಜಾರಿಗೆ ತರುವುದಾಗಿ ಸರ್ಕಾರದವರು ಹೇಳಿರುವುದು ನಿಜವೇ, ಆಗಿದ್ದಲ್ಲಿ ಇದುವರೆಗೂ ಇದು ಕಾರ್ಯರೂಪಕ್ಕೆ ಬರದಿರಲು ಕಾರಣವೇನು?

ಶ್ರೀ ಕೆ.ಶಾಣಪ್ಪ (ಅಬಕಾರಿ ಸಚಿವರು):-

ಅ) ರಾಜ್ಯದಲ್ಲಿ ಹಂತ ಹಂತವಾಗಿ ಪಾನ ನಿಷೇಧ ತರಲಾಗುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಘೋಷಿಸಲಾಗಿದೆ. ಪಾನ ನಿಷೇಧ ಜಾರಿಗೆ ತರುವುದರಿಂದ ಉಂಟಾಗುವ ಸಾಧಕ ಬಾಧಕಗಳ ಬಗ್ಗೆ ಪರಿಶೀಲಿಸಲು ಸಚಿವ ಸಂಪುಟದ ಉಪ-ಸಮಿತಿಯೊಂದನ್ನು ನೇಮಿಸಲಾಗಿದ್ದು, ಸದರಿ ಸಮಿತಿಯು ತನ್ನ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ. ಮಾರ್ಚ್ ತಿಂಗಳಲ್ಲಿ ಚುನಾವಣೆಗಳನ್ನು ಘೋಷಿಸಲಾದ್ದರಿಂದ ಮತ್ತು ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿದ್ದರಿಂದ ಯಾವುದೇ ಹೊಸ ನೀತಿಯ ಬಗ್ಗೆ ಸರ್ಕಾರ ತಿರ್ಮಾನ ತೆಗೆದುಕೊಳ್ಳುವುದನ್ನು ತಡೆಹಿಡಿಯಲಾಯಿತು. ಆದ್ದರಿಂದ ಪಾನ ನಿಷೇದದ ಬಗ್ಗೆ ಸರ್ಕಾರ ಅಂತಿಮ ತೀರ್ಮಾನ ತೆಗೆದುಕೊಂಡಿರುವುದಿಲ್ಲ. ಸಚಿವ ಸಂಪುಟವು ಪುನರ್‌ರಚನೆಯಾದ ಹಿನ್ನೆಲೆಯಲ್ಲಿ ಸಚಿವ ಸಂಪುಟದ ಉಪ-ಸಮಿತಿಯನ್ನೂ ಸಹ ದಿನಾಂಕ 14-6-96ರಂದು ಪುನರ್ ರಚಿಸಲಾಗಿದೆ. ಈ ಪುನರ್ ರಚಿತ ಉಪ-ಸಮಿತಿಯು ಈ ವಿಷಯವನ್ನು ಪರಿಶೀಲಿಸುತ್ತಿದೆ. ಈ ಬಗ್ಗೆ ಸಚಿವ ಸಂಪುಟದ ಉಪ-ಸಮಿತಿಯು ಸಲ್ಲಿಸುವ ವರದಿಯನ್ನು ಪರಿಶೀಲಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು.

ವಿಷಯ:- ಇಂಡಿ ಕ್ಷೇತ್ರದಲ್ಲಿ ಸಾರಾಯಿ ಅಂಗಡಿಗಳಿಗೆ ಅನುಮತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 642 (1468)

ಶ್ರೀ ರವಿಕಾಂತ್ ಎಸ್.ಪಾಟೀಲ್ (ಇಂಡಿ):- ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ಮತಕ್ಷೇತ್ರದಲ್ಲಿ ಅನುಮತಿ ನೀಡಿರುವ ಸಾರಾಯಿ ಅಂಗಡಿಗಳು ಎಷ್ಟು? ಹಾಗಿದ್ದಲ್ಲಿ ಪರವಾನಗಿ ಇಲ್ಲದೆ ನಡೆಯುತ್ತಿರುವ ಸಾರಾಯಿ ಅಂಗಡಿ ಮುಚ್ಚಿಸುವ ಕಾರ್ಯ ನಡೆಯುತ್ತಿದೆಯೇ?

ಶ್ರೀ ಕೆ.ಶಾಣಪ್ಪ (ಅಬಕಾರಿ ಸಚಿವರು):-

ಅ) ಇಂಡಿ ಮತಕ್ಷೇತ್ರದಲ್ಲಿ 31 ಸಾರಾಯಿ ಅಂಗಡಿಗಳಿಗೆ ಅನುಮತಿ ನೀಡಲಾಗಿದೆ. ಪರವಾನಗಿ ಇಲ್ಲದೆ ಸಾರಾಯಿ ಅಂಗಡಿಗಳು ನಡೆಯುತ್ತಿರುವುದು ಕಂಡು ಬಂದಿಲ್ಲ. ಏನಾದರೂ ಕಂಡುಬಂದಲ್ಲಿ ಅವುಗಳನ್ನು ಮುಚ್ಚಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.